ಭೇಟಿಗಳು. ಪ್ರವಾಸೋದ್ಯಮದಲ್ಲೇ ಇದ್ದ ನನಗೆ ಮನೆಯಿಂದ ಹೊರಡುವುದು ದೊಡ್ಡ ಸಮಸ್ಯೆಯೇನಲ್ಲ. ಆದರೆ, ಮನೆಯಿಂದ ಹೊರಡುವಾಗ ಯಾವುದೋ ಗಿಲ್ಟ್ ಕಾಡಿದ್ದಿದೆ. ನಿಜ ಹೇಳಬೇಕೆಂದರೆ ಆನಂದನಿಗೆ ಬೈ ಅನ್ನುವಾಗ ಆಗುವುದಕ್ಕಿಂತಲೂ ಹೆಚ್ಚಿನ ಗಿಲ್ಟ್ ಮಗಳಿಗೆ ಕೈಬೀಸುವಾಗ ಆಗಿದೆ. ಆದರೆ, ಒಮ್ಮೆಯೂ ಆ ಗಿಲ್ಟ್ ನನ್ನ ಪ್ರಯಾಣವನ್ನು ತಪ್ಪಿಸುವಷ್ಟು ಪ್ರಬಲವಾಗಿರಲಿಲ್ಲ. ಇನ್ನೊಂದು ವಿಡಂಬನೆ ಎಂದರೆ ಇದು ನನ್ನನ್ನು ಇನ್ನೂ ಹೆಚ್ಚಿನ ತಾಳ್ಮೆಯ ಹೆಂಡತಿಯಾಗಿಸಿದೆ, ಇನ್ನೂ ಹೆಚ್ಚು ಚಟುವಟಿಕೆಯ ಅಮ್ಮನನ್ನಾಗಿಸಿದೆ. ಈ ಅಫೇರ್‌ಗಳಿಂದಲೇ ಎಷ್ಟೋ ಸಂಸಾರಗಳು ಉಳಿದುಕೊಂಡಿವೆಯೇನೋ ಎಂದು ಒಮ್ಮೆ ಶಮಾ ನಿಟ್ಟುಸಿರು ಬಿಟ್ಟಿದ್ದಳು. ಒಂದು ಸಲ ಮಾತ್ರ ನನ್ನ ಅಪೆಂಡಿಕ್ಸ್ ಆಪರೇಶನ್ ಕಾರಣದಿಂದ ನಾನು ಹೋಗಲಾಗಲಿಲ್ಲ. ಹುಡುಕಿದ್ದರೆ, ಪ್ರಯತ್ನ ಪಟ್ಟಿದ್ದರೆ ಅವನ ನಂಬರ್ ಹುಡುಕಿ, ಅವನಿಗೆ ತಿಳಿಸುವುದು ಕಷ್ಟವೇನಿರಲಿಲ್ಲ. ಆದರೆ, ಯಾವುದೋ ಒಂದು ಹುಚ್ಚು ಕಾರಣ ನನ್ನನ್ನು ತಡೆಯಿತು. ಯಾವುದಾದರೂ ಸಂಬಂಧ ತೀರಾ ಹತ್ತಿರವಾಗಿಬಿಟ್ಟರೆ ನನಗೆ ಹೆದರಿಕೆ ಶುರುವಾಗುತ್ತದೆ. ಯಾವುದೇ ಸಂಬಂಧದಲ್ಲಿ ಪೂರ್ಣವಾಗಿ ಮುಳುಗುವುದರ ಬಗ್ಗೆ ನನಗೊಂದು ಫೋಬಿಯಾ ಇದೆ, ಅವರು ಕೈಬಿಡಬಹುದು ಎನ್ನುವ ಹೆದರಿಕೆ, ಕೈಬಿಟ್ಟರೆ ನಾನು ಸಂಭಾಳಿಸಿಕೊಳ್ಳಲಾರೆನೇನೋ ಎನ್ನುವ ಹೆದರಿಕೆ. ಹಾಗೊಂದು ವೇಳೆ ನಾಳೆ ಅವರು ಹೊರಡಬಹುದು ಎನ್ನುವ ಆತಂಕದಲ್ಲಿ, ಇಂದೇ ಬಾಗಿಲನ್ನು ತೆಗೆದಿಟ್ಟುಬಿಡುತ್ತೇನೆ. ಆಗಾಗ ಹಾಗೆ ಕಿಟಕಿ ಬಾಗಿಲನ್ನು ತೆರೆದಿಟ್ಟು ಗಾಳಿಯಾಡಲು ಬಿಡುವುದು ಸಂಬಂಧಗಳ ದೃಷ್ಟಿಯಿಂದಲೂ ಒಳ್ಳೆಯದೇನೋ. ಹಾಗೆ ತಪ್ಪಿದ ಭೇಟಿಯ ನಂತರ ಮತ್ತೆ ನಾನು ಆರು ತಿಂಗಳ ನಂತರ ಮೌಂಟ್ ಅಬುಗೆ ಹೋಗಿದ್ದೆ. ಅವನು ಬೆಲ್ ಮಾಡುವವರೆಗೂ ಆತಂಕದಲ್ಲಿ ಕಾದವಳು, ಅವನನ್ನು ಕಂಡಕೂಡಲೆ ನೀರವವಾಗಿ ಅತ್ತುಬಿಟ್ಟಿದ್ದೆ. ಮೌನವಾಗಿ ಬೆನ್ನು ಸವರುತ್ತಲೇ ಇದ್ದ ಅವನ ಕಣ್ಣುಗಳಲ್ಲೂ ನೀರು... 'ಈ ಸಲ ನೀನು ಬರದಿದ್ದರೂ, ಮುಂದಿನ ಪಾಳಿ ತಪ್ಪಿಸುತ್ತಿರಲಿಲ್ಲ ಪಾಪಿ...' ಒರಟೊರಟಾಗಿ ಕೇಳುವ ತಮಿಳಿನಲ್ಲಿ ಅಷ್ಟು ಆರ್ದ್ರವಾಗಿ ಕರೆಯಬಹುದೆ, 'ತಂಗಂ, ರಾಸಾತ್ತಿ, ಇಳವರಸಿ, ಎನ್ ಪೆಣ್ಣೇ...' ಏನೆಲ್ಲಾ ಕರೆಯುತ್ತಿದ್ದ... ಪ್ರತಿಸಲ ಹೊಸ ಹೆಸರಿನಿಂದ ಕರೆದಾಗಲೂ ಆ ಹೆಸರನ್ನು ಮನಸ್ಸಿನಲ್ಲಿ ಹಚ್ಚೆ ಹಾಕಿಟ್ಟುಕೊಳ್ಳುತ್ತಿದ್ದೆ. ಹಟಮಾಡಿ ಎಳೆಯದವನು, 'ಇದೋ ಇಲ್ಲಿ ನಿನ್ನ ಸಹಿ ಮಾಡಿ ಮುಂದೆ ಹೋಗು' ಎಂದು ಹೆಗಲನ್ನು ತೋರಿಸಿದರೆ ಮೃದುವಾಗಿ ಮುತ್ತಿಟ್ಟು, ಕೆನ್ನೆ ಒತ್ತುವವನು, ಅವನೆದೆಯ ಮೇಲಿನ ನನ್ನ ಸಹಿಯ ನೀಲಿಚಿಟ್ಟೆಯನ್ನು ನೋಡಿ 'ರಾಚ್ಚಾಸಿ' ಎಂದು ಮುದ್ದಿನಲಿ ಕರೆಯುವವನು.

ಒಮ್ಮೊಮ್ಮೆ ಗೆರೆಕೊರೆದಂತೆ ಪ್ರತ್ಯೇಕವಾಗಿ ಹರಿಯುತ್ತಿರುವ ನದಿಯಪಾತ್ರಗಳು ಅನೂಹ್ಯ ಕೂಡುದಾರಿಯಲ್ಲಿ ಸೇರಿ ನಮ್ಮ **best laid plans**ಗಳನ್ನು ಬೆರಳತುದಿಯಿಂದ ಕೊಡವಿ ಚೆಲ್ಲಿಬಿಡುತ್ತದೆ. ಅಂದು ಆಫೀಸಿನಲ್ಲಿ ಗಡಿಬಿಡಿ. ಭಾರತದ ಮತ್ತೊಂದು ಪ್ರಮುಖ ಟ್ರಾವೆಲ್ ಕಂಪನಿಯೊಂದಿಗೆ ನಮ್ಮ ಸಂಸ್ಥೆ ಮರ್ಜರ್ ಆಗಿ ಟಾಪ್ ಮ್ಯಾನೇಜ್ಮೆಂಟಿನಲ್ಲಿ ಹಲವಾರು ಬದಲಾವಣೆಗಳಾಗಿದ್ದವು. ಬೋರ್ಡ್ ರೂಮಿನಲ್ಲಿ ಎಂಡಿ **'This is Mr Karthikeyan, our new operations head'** ಎಂದು ಪರಿಚಯ ಮಾಡಿಕೊಟ್ಟರು, ಉಸಿರು ಎದೆಯಲ್ಲೇ ಸಿಕ್ಕಿಹಾಕಿಕೊಂಡಿತು. ಅವನನ್ನು ಕಂಡ ಕೂಡಲೇ ಅಯಾಚಿತವಾಗಿ ಅರಳಿದ್ದ ಕಣ್ಣು, ಮುಖ, ಚಂದ್ರಮತಿಯ ಮಾಂಗಲ್ಯದಂತಹ ಮುಚ್ಚಿಟ್ಟ ನೆನಪೊಂದು ಹೀಗೆ ಹಠಾತ್ತಾಗಿ ಎಲ್ಲರ ಮುಂದೆ ಪ್ರಕಟವಾದ ಆಘಾತ. ಹೃದಯ ಒಮ್ಮೆಗೆ ಅತಿ ವಿಳಂಬಿತ್‌ನಿಂದ ಅತಿ ಧೃತ್‌ಗೆ ಏರಿತ್ತು. **'An accomplished musician too'** ಎಂಡಿ ಮುಂದುವರಿಸಿದ್ದರು. **'Rudra is my musical name, just like pen name'** ಎಂದು ಅವನು ಮುಗುಳ್ನಕ್ಕಿದ್ದ. ಆದರೆ, ಯಾಕೋ ಅವನನ್ನು ನನ್ನ ಆ ಪರಿಸರದಲ್ಲಿ ಒಪ್ಪಿಕೊಳ್ಳಲು